## ವಾರ್ತಾ ವಿಶ್ಲೇಷಣೆ

### ಅಚಲ ನಿಷ್ಠೆ ಬೆಟ್ಟವನ್ನೇ ಕದಲಿಸಿತು

'ಛಲವಿದ್ದರೆ ಬೆಟ್ಟವೂ ದಾರಿ ಮಾಡಿಕೊಡುತ್ತದೆ.' 'ಪ್ರೀತಿಯ ಬಲಕ್ಕೆ ಯಾವ ಅಡಚಣೆಯೂ ದೊಡ್ಡದಲ್ಲ' ಎಂಬ ನಾಣ್ನುಡಿಗಳು ಕೇಳಲು ಚೆನ್ನ. ಅದನ್ನು ಪ್ರತ್ಯಕ್ಷವಾಗಿ ಕಂಡವರೆಷ್ಟು ಜನ? ಅಂತಹ ಒಂದು ಘಟನೆ ನಮ್ಮ ಭಾರತದಲ್ಲೇ ನಡೆದಿದೆ. ಅದೂ ಬಿಹಾರದಲ್ಲಿ! ಓದಿ ನೋಡಿ, ಮೂಗಿನ ಮೇಲೆ ಬೆರಳಿಟ್ಟು 'ಹೀಗೂ ಉಂಟೆ!' ಎಂದು ಉದ್ಗರಿಸಿರಿ. ಟೈಂಸ್ ಆಫ್ ಇಂಡಿಯಾ ಹಾಗೂ ಆಂದೋಲನ (೧೪.೧.೨೦೦೭) ಪತ್ರಿಕೆಗಳಲ್ಲಿ ವರದಿಯಾಗಿರುವ ಈ ನೈಜ ಘಟನೆ ನಮ್ಮಲ್ಲಿ ತಾಳ್ಮೆ ಹಾಗೂ ಸತತ ಪ್ರಯತ್ನದ ಕಿರಣಗಳನ್ನು ಬೆಳಗಿಸಲಿ.

ಇದು ನಡೆದದ್ದು ೧೯೬೦ರಲ್ಲಿ. ಬಿಹಾರದ ಗಯಾ ಜಿಲ್ಲೆಯ ಗೆಹಲೋಘಾಟಿ ಎಂಬ ಹಳ್ಳಿಯ ನಿವಾಸಿ ದಶರಥ ಮಾಂಝೀ ಒಬ್ಬ ಸಾಮಾನ್ಯ ವ್ಯಕ್ತಿ. ಓದಿಲ್ಲ, ಜಮೀನಿಲ್ಲ, ಯಾವುದೇ ಕೆಲಸವೂ ಇಲ್ಲ. ಎಪ್ಪತ್ತು ವರ್ಷಗಳ ಈ ಮುದುಕ ಇಂದು ಬಹಳ ದೊಡ್ಡ ವ್ಯಕ್ತಿಯಾಗಿದ್ದಾನೆ, ಗೌರವಾರ್ಹನಾಗಿದ್ದಾನೆ. ಕಾರಣ, ಅವನು ತನ್ನ ಹಳ್ಳಿಯ ವಿಕಾಸಕ್ಕೆ ಅಡಚಣೆಯಾಗಿದ್ದ ಬೆಟ್ಟವನ್ನು ಏಕಾಂಗಿಯಾಗಿ ಕಡಿದು ದಾರಿ ನಿರ್ಮಿಸಿದ! ಮಾಂಝೀ ಹಳ್ಳಿಯ ಆ ಬದಿಗಿರುವ ನಾಜಿರ್‌ಗಂಜ್ ಸ್ವಲ್ಪ ಅನುಕೂಲಗಳಿರುವ ಊರು. ಅಲ್ಲಿ ಆಸ್ಪತ್ರೆಯಿದೆ, ಶಾಲೆಯಿದೆ, ನಗರದ ಪದಾರ್ಥಗಳು ದೊರೆಯುವ ಅಂಗಡಿಗಳಿವೆ. ಆದರೆ ಅಲ್ಲಿಗೆ ಹೋಗಬೇಕಾದರೆ ಬೆಟ್ಟವನ್ನು ಬಳಸಿಕೊಂಡೇ ಹೋಗಬೇಕು.

೧೯೬೦ರಲ್ಲಿ ಮಾಂಝೀ ಇನ್ನೂ ಇಪ್ಪತ್ತೆರಡು ವರ್ಷಗಳ ಯುವಕ. ಆಗ ಅವನ ಹೆಂಡತಿಯ ಕಾಲಿಗೆ ಏಟಾಗಿ ಆಸ್ಪತ್ರೆಗೆ ಹೋಗಬೇಕಾಯಿತು. ಬೆಟ್ಟವನ್ನು ಸುತ್ತಿ ಬಳಸಿ ಹೋಗುವ ಕಷ್ಟವನ್ನು ಕಂಡು, ಅನುಭವಿಸಿ, ಆ ಬೆಟ್ಟದ ನಡುವೆ ಇದ್ದ ಒಂದು ಅಡಿಯ ಬಿರುಕನ್ನು ದೊಡ್ಡದು ಮಾಡಿ ರಸ್ತೆಯನ್ನು ತಯಾರು ಮಾಡಬಹುದೆಂಬ ಆಲೋಚನೆ ಮಾಂಝೀಗೆ ಬಂದಿತು. ಆಗ ನೆರೆಯೂರಿನ ಸೌಲಭ್ಯಗಳು ನಮ್ಮ ಹಳ್ಳಿಗೆ ಬರುವುದು ಮತ್ತು ಎಲ್ಲರಿಗೂ ಅದರಿಂದ ಉಪಕಾರವಾಗುವುದು; ಸರ್ಕಾರವನ್ನು ಒಪ್ಪಿಸುವ ಕೆಲಸಕ್ಕಿಂತ ಬೆಟ್ಟ ಅಗೆಯುವುದೇ ಸುಲಭ ಎನಿಸಿತು ಮಾಂಝೀಗೆ.

ಒಬ್ಬನೇ ಬೆಟ್ಟ ಕಡೆದು ದಾರಿ ಮಾಡುತ್ತೇನೆ ಎಂದು ನಿಂತದ್ದನ್ನು ಕೇಳಿ ಊರ ಜನ ಇವನಿಗೆ ತಲೆ ಕೆಟ್ಟಿದೆ ಎಂದುಕೊಂಡರು. 'ಹುಚ್ಚ' ಎಂದು ಎದುರಿಗೇ ಜರಿದರು. ಅವನ ತಂದೆ, ಹೆಂಡತಿಯೂ ಸೇರಿದಂತೆ ಎಲ್ಲರೂ ಇವನ ಈ ಹುಚ್ಚು ಸಾಹಸಕ್ಕೆ ಪ್ರತಿರೋಧ ಒಡ್ಡಿದರು. ಆದರೆ ಮಾಂಝೀ ಬೆಟ್ಟಕ್ಕಿಂತ ಅಚಲನಾಗಿದ್ದ. ದೆವ್ವ ಹಿಡಿದವನಂತೆ ತನ್ನ ಆಡು, ಕುರಿಗಳನ್ನು ಮಾರಿ ಉಳಿ, ಹಗ್ಗ ಕೊಂಡುಕೊಂಡ. ಬೆಟ್ಟದ ಹತ್ತಿರವೇ ಒಂದು ಗುಡಿಸಲನ್ನು ಕಟ್ಟಿಕೊಂಡು, ಹಸಿವನ್ನೂ ಮರೆತು ಹಗಲೂರಾತ್ರಿ ದುಡಿಯಲಾರಂಭಿಸಿದ.

ಹತ್ತು ವರ್ಷಗಳ ತನಕ ಬೆಟ್ಟದಲ್ಲಿ ಯಾವ ಬದಲಾವಣೆಯೂ ಕಂಡು ಬರಲಿಲ್ಲ. ಆಮೇಲೆ ದಾರಿ ದೊಡ್ಡದಾಗುತ್ತ ಬಂದಂತೆ ಬೆಟ್ಟ ಹತ್ತುವುದು ಇಳಿಯುವುದು ತುಸು ಸುಲಭ ಆಯಿತು. ಇಲ್ಲಿಯ ತನಕ ಅವನನ್ನು ಹುಚ್ಚ ಎಂದು ಕರೆದವರು ಈಗ 'ಪರವಾಗಿಲ್ಲವೇ?' ಎನ್ನುತ್ತ ಇವನು ಮಾಡುತ್ತಿದ್ದ ಕೆಲಸವನ್ನು ನೋಡುತ್ತ ನಿಂತರು. ಕೆಲವರು ಮುಂದೆ ಬಂದು ಸಹಕರಿಸಿದರು. ಇಪ್ಪತ್ತೆರಡು ವರ್ಷಗಳ ಸತತ ಕೆಲಸದ ನಂತರ ೧೯೮೨ರಲ್ಲಿ ಬೆಟ್ಟದ ನಡುವೆ ಹದಿನಾರು ಅಡಿ ಅಗಲದ ಒಂದು ದಾರಿ ನಿರ್ಮಾಣವಾಗಿತ್ತು. ಆದರೆ ಈ ಯಶಸ್ಸನ್ನು ಕಾಣಲು ಅವನ ಹೆಂಡತಿ ಉಳಿದಿರಲಿಲ್ಲ. "ನನ್ನ ಮಡದಿ ಕಾಯಿಲೆಯಿಂದ ತೀರಿಕೊಂಡಳು. ರಸ್ತೆಯಿದ್ದಿದ್ದರೆ ಉತ್ತಮ ಚಿಕಿತ್ಸೆ ನೀಡಬಹುದಿತ್ತು; ಸರಿಯಾದ ಸಮಯಕ್ಕೆ ಕರೆದೊಯ್ಯಬಹುದಿತ್ತು" ಎಂದು ಪೇಚಾಡುತ್ತಾನೆ ಮಾಂಝೀ.

### ಆತ್ಮೀಯ ಸ್ಪಂದನ

ರಷ್ಯಾದ ಯುದ್ಧಕಾಲದ ನಂತರ ಭೀಕರವಾದ ಕ್ಷಾಮ ತಲೆದೋರಿತು. ಅಂತಹ ದಿನಗಳಲ್ಲಿ ಟಾಲ್‌ಸ್ಟಾಯ್ ಒಂದು ದಿನ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಭಿಕ್ಷುಕನೊಬ್ಬನನ್ನು ಕಂಡರು. ಕೂಡಲೆ ತಮ್ಮ ಜೇಬಿಗೆ ಕೈ ಹಾಕಿ ಚಿಲ್ಲರೆ ಹಣಕ್ಕಾಗಿ ತಡಕಾಡಿದರು. ಈಗಾಗಲೇ ಎಲ್ಲವನ್ನೂ ಇತರರಿಗೆ ಕೊಟ್ಟಿದ್ದ ಅವರಲ್ಲಿ ಬಿಡಿಗಾಸೂ ಇರಲಿಲ್ಲ. ಅನುಕಂಪೆಯಿಂದ ಆ ಬಡವನನ್ನು ತಬ್ಬಿಕೊಂಡು ಗುಳಿಬಿದ್ದಿದ್ದ ಅವನ ಗಲ್ಲವನ್ನು ಚುಂಬಿಸಿ ಹೇಳಿದರು, "ತಮ್ಮ, ದಯವಿಟ್ಟು ಬೇಸರ ಮಾಡಿಕೊಳ್ಳಬೇಡ. ನನ್ನಲ್ಲಿ ನಿನಗೆ ಕೊಡಲು ಏನೂ ಇಲ್ಲ!" ಆ ಬಡವನ ಮುಖದಲ್ಲಿ ಬೆಳಕು ಮೂಡಿತು. ಆನಂದದ ಕಣ್ಣೀರು ಸುರಿಸುತ್ತ ಅವನು ಹೇಳಿದ, "ನೀವು ನನ್ನನ್ನು 'ತಮ್ಮ' ಎಂದು ಕರೆದಿರಲ್ಲ. ಅದಕ್ಕಿಂತ ಉತ್ತಮವಾದ ಉಡುಗೊರೆ ಯಾವುದಿದೆ!"